ಇ) ಹೌದು

ಈ) ಶಿರಾ ತಾಲ್ಲೂಕಿನ ಲಕ್ಕನಹಳ್ಳಿಯಲ್ಲಿ ಈ ವರ್ಷ ಒಂದು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಉಳಿದ ಸ್ಥಳಗಳ ಕುರಿತು ೧೯೯೨-೯೩ರಲ್ಲಿ ಅವಶ್ಯಕತೆ ನೋಡಿ ಆದ್ಯತೆ ಮೇಲೆ ಪರಿಗಣಿಸಲಾಗುವುದು.

ಕುದರೆ ಕಣಿವೆ ಜಮೀನನ್ನು ಸಾಗುವಳಿದಾರರಿಗೆ ನೀಡುವುದು

೧೩೨೩(೨೦೦೭)ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು, ಹುಳಿಯೂರು ಹೋಬಳಿ, ತಮ್ಮಡಹಳ್ಳಿ ಗೊಲ್ಲರ ಹಟ್ಟಿ ನಿವಾಸಿಗಳು ಶ್ರೀರಾಂಪುರ ಹೋಬಳಿ (ಚಿತ್ರದುರ್ಗ ಜಿಲ್ಲೆ) ಕುದರೆ ಕಣಿವೆ ಸರ್ವೆ ನ. ೧ರಲ್ಲಿ ಕಳೆದ ೧೦ ವರ್ಷಗಳಿಂದ ೨೦೦ ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿರುವುದು ನಿಜವೇ?

ಆ) ಸದರಿ ಜಮೀನಿನ ಮಾಲೀಕತ್ವಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಬಗರ್ ಹುಕುಂ ರೀತ್ಯಾ ಪಟ್ಟಾ ನೀಡಲು ಅರ್ಜಿ ಸಲ್ಲಿಸಿದ್ದು ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಇ) ಸಾಗುವಳಿ ಮಾಡುತ್ತಿರುವ ಜಮೀನನ್ನು ಅರಣ್ಯ ಇಲಾಖೆಯವರು ಅವರ ಇಲಾಖೆಗೆ ಸಂಬಂಧಿಸಿದ ಜಮೀನು ಎಂದು ಅಲ್ಲಿಯ ರೈತರಿಗೆ ಹೆದರಿಸಿ ಗುಂಡಿ ತೋಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ರೀತಿ ೧೦ ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದ ರೈತರಿಗೆ ಅರಣ್ಯ ಇಲಾಖೆಯವರು ಅನ್ಯಾಯ ಮಾಡಿದಂತಾಗುವುದಿಲ್ಲವೇ?

ಉ) ಹಾಗಿದ್ದಲ್ಲಿ, ಸದರಿ ಜಮೀನನ್ನು ಸಾಗುವಳಿದಾರರಿಗೆ ನೀಡಲು ಸರಕಾರದವರು ಕೈಗೊಂಡ ಕ್ರಮವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):-

ಅ) ಹೊಸದುರ್ಗ ತಾಲ್ಲೂಕು, ಕುದರೆ ಕಣಿವೆ ಗ್ರಾಮದ ಸರ್ವೆ ನ. ೧ರಲ್ಲಿ ೨೦೦ ಎಕರೆ ಜಮೀನನ್ನು ಚಿಕ್ಕನಾಯಕನಹಳ್ಳಿ ತಾಲ್ಲೂಕು, ತಮ್ಮಡಿಹಳ್ಳಿ ಗೊಲ್ಲರಹಟ್ಟಿ ನಿವಾಸಿಗಳು ಕಳೆದ ೧೦ ವರ್ಷಗಳಿಂದ ಸಾಗುವಳಿ ಮಾಡುತ್ತಿರುವುದು ಸತ್ಯ ಸಂಗತಿಯಾಗಿರುವುದಿಲ್ಲ.

ಆ) ಚಿಕ್ಕನಾಯಕನ ಹಳ್ಳಿ ತಾಲ್ಲೂಕು, ತಮ್ಮಡಿಹಳ್ಳಿ ಗ್ರಾಮಸ್ಥರು ಅನಧಿಕೃತ ಸಾಗುವಳಿಯನ್ನು ಸಕ್ರಮೀಕರಣಗೊಳಿಸಲು ಅರ್ಜಿಯನ್ನು ಸಲ್ಲಿಸದೇ ಇರುವುದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ ಮತ್ತು ಈ) ಹೊಸದುರ್ಗ ತಾಲ್ಲೂಕು, ಶ್ರೀರಾಂಪುರ ಹೋಬಳಿ, ಕುದರೆಕಣಿವೆ ಗ್ರಾಮದ ಸರ್ವೆ ನಂ. ೧ ರಲ್ಲಿನ ಭೂಮಿಯು ಕಾಯ್ದಿರಿಸಿದ ಅರಣ್ಯ ಪ್ರದೇಶವಾಗಿರುವುದರಿಂದ ಅರಣ್ಯ ಇಲಾಖೆಯ ಅಧಿಕಾರಿಗಳು ಇಂತಹ ಅನಧಿಕೃತ ಸಾಗುವಳಿ ಮಾಡುವ ಪ್ರಯತ್ನವನ್ನು ತಡೆಯಲು

ಕ್ರಮ ಕೈಗೊಂಡು ಗುಂಡಿಗಳನ್ನು ತೋಡಿ ಅರಣ್ಯ ಮರಗಿಡಗಳನ್ನು ಬೆಳೆಸಲು ಕ್ರಮ ಕೈಗೊಂಡಿದ್ದಾರೆ.

ಊ) ಉದ್ಭವಿಸುವುದಿಲ್ಲ.

ಚೇರ್ಮನ್:- ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿಯಿತು. ಈಗ ನಿಯಮ ೩೩ಳರ ಮೇರೆಗೆ ಸಭೆಯಲ್ಲಿ ಬರುವ ವಿಷಯಗಳು.

ಶ್ರೀ ಕೆ. ಎಸ್. ಕಾಳಮರೀಗೌಡ:- ಮಾನ್ಯ ಅಧ್ಯಕ್ಷರೆ, ಒಂದು ವಿಚಾರದ ಬಗ್ಗೆ ನಾವು ನಾಲ್ಕು ಜನ ನೋಟೀಸ್ ಕೊಟ್ಟಿದ್ದೇವೆ. ಅದನ್ನು ಮಂಡಿಸಲು ಅನುಮತಿ ಕೊಡಬೇಕೆಂದು ವಿನಂತಿಸುತ್ತೇನೆ.

ಚೇರ್ಮನ್:- ಹೇಳಿ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ಹೊಗೆಸೊಪ್ಪಿನ ಬೆಳೆಗಾರರಿಗೆ ಆಗಿರುವ ತೊಂದರೆ.

ಶ್ರೀ ಕೆ. ಎಸ್. ಕಾಳಮರೀಗೌಡ(ಪಿರಿಯಾಪಟ್ಟಣ):-ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಸುಮಾರು ಮೇಜರ್ ಆಗಿ, ಪಿರಿಯಾಪಟ್ಟಣ, ಕೆ. ಆರ್. ನಗರ, ಅಡಕಲಗೂಡು, ಹುಣಸೂರು ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಕೆಲವು ಭಾಗಗಳಲ್ಲಿ ಹೊಗೆಸೊಪ್ಪಿನ ಬೆಳೆಮಾಡುತ್ತಿದ್ದಾರೆ. ಈಗಾಗಲೇ ಸಾಕಷ್ಟು ಪ್ರಮಾಣದಲ್ಲಿ ಹತ್ತಾರು ವರ್ಷಗಳಿಂದ ಹೊಗೆಸೊಪ್ಪಿನ ಬೆಳೆ ಮಾಡಿಕೊಂಡು ಬ್ಯಾರನ್‌ಗೆ ಪರ್ಮಿಷನ್ ಕೊಡತಕ್ಕದ್ದಕ್ಕೆ ಸೆಂಟ್ರಲ್ ಬೋರ್ಡ್ ಇದೆ. ಬ್ಯಾರನ್ ಕಟ್ಟುವುದಕ್ಕೆ ಸೆಂಟ್ರಲ್ ಬೋರ್ಡ್‌ನವರು ಲೈಸನ್ಸ್ ಕೊಡಬೇಕು. ಮತ್ತು ಬ್ಯಾಂಕ್‌ಗಳ ಮುಖಾಂತರ ಡೆವಲಪ್‌ಮೆಂಟ್ ಲೋನ್ ಎಲ್ಲಾ ಕೊಟ್ಟು ಕೊಂಡು ಬರುತ್ತಿದ್ದಾರೆ. ಕಳೆದ ವರ್ಷ ಕೂಡ ಅದೇ ರೀತಿಯಾಗಿ ಪರ್ಮಿಷನ್ ಕೊಟ್ಟಿದ್ದರು. ಇದೊಂದು ಕಮರ್ಷಿಯಲ್ ಬೆಳೆ ಎಂಬುದು ಎಲ್ಲರಿಗೂ ಗೊತ್ತಿದೆ. ಕಳೆದ ವರ್ಷ ರೈತರು ಒಂದು ಬ್ಯಾರನ್‌ಗೆ ೩೦-೪೦ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಡ ಕಟ್ಟಿದರು. ಬ್ಯಾರನ್ ಕಟ್ಟಿಡ ಕಟ್ಟಿದರು, ಬೆಳೆ ಕೂಡ ಮಾಡಿದರು. ಬೆಳೆಗೆ ಟೊಬ್ಯಾಕೊ ಬೋರ್ಡ್‌ನವರು ಪರ್ಮಿಷನ್ ಕೂಡ ಕೊಟ್ಟರು. ಬ್ಯಾಂಕ್‌ಗೆ ಟೈ ಅಪ್ ಅರೇಂಜ್‌ಮೆಂಟ್ ಎಂದು ಕೊಡಬೇಕಾಗುತ್ತದೆ. ಟೈ ಅಪ್ ಅರೇಂಜ್‌ಮೆಂಟ್‌ಗೆ ಇವರು ಬ್ಯಾರನ್ ಮಾಡಬಹುದು, ಹೊಗೆಸೊಪ್ಪಿನ ಬೆಳೆ ಮಾಡಬಹುದು ಎಂದು ಈ ಒಂದು ವ್ಯವಹಾರಕ್ಕೆ ಬ್ಯಾಂಕುಗಳಿಗೆ ಕೂಡ ಪರ್ಮಿಷನ್ ಕೊಟ್ಟರು. ಪರ್ಮಿಷನ್ ಕೊಟ್ಟು ಆದಮೇಲೆ ಪುನಃ ಮಾರ್ಕೆಟ್ ಮಾಡುವುದಕ್ಕೆ ಕೂಡ ಯಾರು ಯಾರು ಬ್ಯಾರೆನ್ ಕಟ್ಟಿದ್ದಾರೆ, ಯಾರು ಯಾರು ಹೊಗೆಸೊಪ್ಪನ್ನು ಬೆಳೆದಿದ್ದಾರೆ ಅಂತಹವರಿಗೆ ಮಾರ್ಕೆಟ್ ಮಾಡುವುದಕ್ಕೆ ಕೂಡ ಅವಕಾಶ ಕೊಟ್ಟರು. ಅದಕ್ಕೆ ಮೂರು ಪರ್‌ಸೆಂಟ್ ಸೆಸ್ ಕೂಡ ಹಾಕಿದರು. ಯಾರು ಯಾರು ಈ ವರ್ಷ ಹೊಸದಾಗಿ ಕಟ್ಟಿದ್ದಾರೆ ಅವರು ಮೂರು ಪರ್‌ಸೆಂಟ್ ಸೆಸ್ ಕೊಡಬೇಕೆಂದು ಹೇಳಿದರು. ಕಳೆದ ವರ್ಷ ಹೇಗೋ ಮಾರ್ಕೆಟ್ ಆಯಿತು. ಈ ವರ್ಷ ಈ ತಿಂಗಳಲ್ಲಿ ಇದನ್ನು ರಿನ್ಯೂ ಮಾಡಬೇಕಾಗುತ್ತದೆ. ಹೊಗೆಸೊಪ್ಪನ್ನು ಬೆಳೆ ಮಾಡತಕ್ಕವರು ಯಾರು ಯಾರು ಇದ್ದಾರೆ ಅವರು ಪ್ರತಿಯೊಬ್ಬರೂ ಪ್ರತಿ ವರ್ಷ, ಆಯಾ ವರ್ಷದ ಮಾರ್ಚ್ ತಿಂಗಳಲ್ಲಿ ಲೈಸನ್ಸ್ ರಿನ್ಯೂ ಮಾಡಿಸಬೇಕಾಗುತ್ತದೆ. ಈ ವರ್ಷ ಅವರು ಲೈಸೆನ್ಸ್ ರಿನ್ಯೂ ಮಾಡಿಸುವುದಕ್ಕೆ ಹೋದಾಗ, ಹೋದವರ್ಷ ನಿಮಗೆ ಕರ್ಮಿಷನ್